ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2958444

ಸಂಪುಟ-21 ಸಂಚಿಕೆ-7 ಪುಟಗಳು-6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಸಮಾಜ ಸೇವಕ ಶ್ರೀ ಯು.ಅರವಿಂದ ಕುಮಾರ್‌ರವರಿಗೆ ಅಭಿನಂದನೆ

ದಿನಾಂಕ 16–04–2021ರ ಶುಕ್ರವಾರದ ಸುಂದರ ಸಂಜೆ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್ ಅವರು ತಮ್ಮ ವೃತ್ತಿ ಜೀವನದಲ್ಲಿ ವಯೋನಿವೃತ್ತಿ ಹೊಂದಿದ ಬಗ್ಗೆ ಅಭಿನಂದಿಸಿ ಸನ್ಮಾನಿಸಲಾಯಿತು. ಶ್ರೀ ಯು.ಅರವಿಂದ ಕುಮಾರ್ ಅವರ ಬಾಲ್ಯ ಜೀವನದ ಸಹಪಾಠಿ, ಮಣಿಪಾಲ ಮಾಹೆಯ ರಿಸರ್ಚ್ ಡೈರೆಕ್ಟರ್ ಡಾ. ಸತೀಶ್ ರಾವ್ ಬಿ.ಎಸ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಶ್ರೀ ಯು.ಅರವಿಂದ ಕುಮಾರ್ ಅವರನ್ನು ಸನ್ಮಾನಿಸುತ್ತಾ "ವ್ಯಕ್ತಿಗಿಂತ ವ್ಯಕ್ತಿತ್ವ ದೊಡ್ಡದು, ಅರವಿಂದರು ಮಣಿಪಾಲದ ಆಸ್ಪತ್ರೆಯಲ್ಲಿ ಕೇವಲ ಸಂಬಳದ ನೌಕರರಾಗಿ ದುಡಿದದ್ದು ಮಾತ್ರವಲ್ಲ; ಮಾನವೀಯತೆಯ ಬಹು ಮುಖ್ಯ ಗುಣವಾದ ಅಮಾಯಕರಿಗೆ ಸಹಾಯ ಮಾಡುವ ಮಹಾನ್ ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಅದಕ್ಕಾಗಿ ಮಣಿಪಾಲದ ನಮ್ಮ ಸಮಾಜ ಬಂಧುಗಳನೇಕರನ್ನು ಬಳಸಿಕೊಂಡ ಸಾಕಷ್ಟು ಉದಾಹರಣೆಗಳೂ ಇವೆ. ಸಂಬಂಧಿಕರು ದೂರವಾದರೂ ಸಂಬಂಧಗಳು ದೂರವಾಗಲು ಗೆಳೆತನವು



ಬಿಡುವುದಿಲ್ಲ. ಶ್ರೀ ಅರವಿಂದರು ಇಂತಹ ಅನೇಕ ಗುಣಗಳಿಂದ ಇಂದು ಅಭಿನಂದನೆಗೆ ಅರ್ಹರು" ಎಂದು ಹೇಳಿದರು.

ಅಭಿನಂದನೆಗೆ ಉತ್ತರಿಸಿ ಮಾತನಾಡಿದ ಶ್ರೀ ಯು.ಅರವಿಂದ ಕುಮಾರ್ "ನೀವೆಲ್ಲಾ ಹೇಳಿದಂತೆ ನಾನು ನನ್ನ ಕರ್ತವ್ಯದ ಜೊತೆ ಏನೋ ಸಮಾಜಕ್ಕೆ ಅತ್ಯಲ್ಪ ಕೊಟ್ಟಿದ್ದೇನೆ. ಅದರಲ್ಲಿಯೂ ಮಣಿಪಾಲ ಆಸ್ಪತ್ರೆಯಲ್ಲಿ ಸೇವೆಯಲ್ಲಿದ್ದ ಡಾ। ಪಿ.ವಿಠಲರಾವ್, ಡಾ। ಬಿ.ಎಚ್.ಆನಂದ್ ರಾವ್, ಡಾ. ಸತೀಶ್ ರಾವ್ ಬಿ.ಎಸ್, ಡಾ। ಶರತ್ ರಾವ್, ಸಿಸ್ಟರ್ ಜಯಲಕ್ಷ್ಮೀ, ಶ್ರೀ ಪ್ರಕಾಶ್ ಕೋಲ್ಪೆ ಮೊದಲಾದವರ ಸಲಹೆ ಸೂಚನೆ ಹಾಗೂ ಸಹಾಯವನ್ನು ಮರೆಯುವಂತಿಲ್ಲ. ಅದಲ್ಲದೆ ಶ್ರೀ ಶಾರದಾ ಮಂಟಪದಲ್ಲಿ ಸುಮಾರು ಮೂವತ್ತು ವರ್ಷಗಳಿಂದ ಸಕ್ರೀಯವಾಗಿ ಕೆಲಸಮಾಡುತ್ತಿದ್ದು, ಎರಡು ಅವಧಿಗೆ ಸಂಘದ ಕಾರ್ಯದರ್ಶಿ ಯಾಗಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿ ಕೊಟ್ಟಿದ್ದೀರಿ. ಇದೇ ನನಗೆ ದೊಡ್ಡ ಅಭಿನಂದನೆ. ಆದರೂ ಇಂದು ನನ್ನನ್ನು ಈ ರೀತಿಯಲ್ಲಿ ಅಭಿನಂದಿಸಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ." ಎಂದರು.

ಸಭೆಯಲ್ಲಿ ಉಪಸ್ಥಿತರಿದ್ದ ಡಾ। ವೈ.ಸುದರ್ಶನ್ ರಾವ್, ಶ್ರೀ ಸಿ.ಎಸ್.ರಾವ್, ಶ್ರೀ ಗಣೇಶ್ ಹೆಬ್ಬಾರ್, ಶ್ರೀ ವೈ.ಭುವನೇಂದ್ರ ರಾವ್, ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ಮೊದಲಾದವರು ಶ್ರೀ ಯು.ಅರವಿಂದ ಕುಮಾರ್ ಅವರ ಕುರಿತು ಅಭಿನಂದಿಸಿ ಮಾತನಾಡಿದರು. ಸಭಾಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀ ಜಯರಾಮ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಕೃಷ್ಣಮೂರ್ತಿ ಬ್ರಹ್ಮಾವರ ಅಭಿನಂದನಾ ಪತ್ರ ವಾಚಿಸಿದರು. ಪ್ರಭಾರ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವಂದನಾರ್ಪಣೆ ಮಾಡಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮ ನಿರೂಪಣೆ ಮಾಡಿದರು.

ಶ್ರೀ ಯು.ಅರವಿಂದ ಕುಮಾರ್ ಅವರಿಗೆ ಶಾಲು, ಹಾರ, ಸ್ಮರಣಿಕೆ, ಫಲಪುಷ್ಪ ಹಾಗೂ ಅಭಿನಂದನಾ ಪತ್ರಗಳನ್ನು ನೀಡಿ, ಪತ್ನಿ ಶ್ರೀಮತಿ ಆಶಾ ಅರವಿಂದ್ ಜೊತೆಯಲ್ಲಿ ಸನ್ಮಾನಿಸಲಾಯಿತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ (ರಿ), ಪಡುಬಿದ್ರೆ : ಮಹಾಸಭೆ

ತಾ.11.4.2021ರಂದು ಸಂಘದ ಮಹಾಸಭೆ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಸಭಾಂಗಣದಲ್ಲಿ ಸರಳ ರೀತಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಂ.ಕೆ.ಮೋಹನ್ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್,ಉಪಾಧ್ಯಕ್ಷರಾದ ಶ್ರೀ ರಾಮರಾವ್, ಶ್ರೀ ಮಾಧವ ರಾವ್, ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ, ಶ್ರೀಮತಿ ಸುಮಿತ್ರಾ ಸುಬ್ಬರಾವ್, ಕಾರ್ಯದರ್ಶಿ ಶ್ರೀಮತಿ ರಮ್ಯ ಅರುಣ್ ರಾವ್, ಕೋಶಾಧಿಕಾರಿ ಶ್ರೀ ಅರವಿಂದ್ ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಜನಾರ್ಧನ್ ರಾವ್ ಉಪಸ್ಥಿತರಿದ್ದರು. ಸಭೆಯಲ್ಲಿ ವಾರ್ಷಿಕ ವರದಿ, ಲೆಕ್ಕಪತ್ರ ಮಂಡನೆ ಹಾಗೂ ಮುಂದಿನ ಯೋಜನೆಗಳನ್ನು ಮಂಜೂರು ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾಗಿ ಆಯ್ಕೆಯಾದ ಸಂಘದ ಜೊತೆ ಕೋಶಾಧಿಕಾರಿ ಶ್ರೀಮತಿ ವೇದಾವತಿ ದಿವಾಕರ್ ರಾವ್



ಇವರನ್ನು ಅಭಿನಂದಿಸಿ ಗೌರವಿಸಲಾಯಿತು. ಹಾಗೂ ಸಂಘದಲ್ಲಿ ವಿಶೇಷವಾಗಿ ತಮ್ಮನ್ನು ತೊಡಗಿಸಿಕೊಂಡ ಸಂಘದ ಉಪಾಧ್ಯಕ್ಷರಾದ ಶ್ರೀ ಮಾಧವರಾವ್ ಹಾಗೂ ನಿರ್ದೇಶಕರು–ಯುವ ವೇದಿಕೆಯ ಕ್ರೀಡಾ ಕಾರ್ಯದರ್ಶಿ ಶ್ರೀ ಕೃಷ್ಣರಾಜ್ ರಾವ್ ಇವರನ್ನು ಸ್ಮರಣಿಕೆ ನೀಡಿ ಗುರುತಿಸಿ ಗೌರವಿಸಲಾಯಿತು. ಮತ್ತು ಪಿಯುಸಿಯಲ್ಲಿ ಶೇಕಡಾ 93.33 ಅಂಕ ಗಳಿಸಿದ ಕುಮಾರಿ ದೀಪಾಲಿ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಬೆಂಗಳೂರಿನಲ್ಲಿ ಹಿರಿಯರ ವಿಭಾಗದಲ್ಲಿ ನಡೆದ 800 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಶ್ರೀ ಕುಮಾರಸ್ವಾಮಿಯವರಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು. ಈ ಸಭೆಯನ್ನು ನಿರ್ದೇಶಕರಾದ ಜ್ಯೋತಿಂದ್ರನಾಥ್ ವೈ ಸ್ವಾಗತಿಸಿ, ಶ್ರೀಮತಿ ಪವಿತ್ರ ಕೃಷ್ಣರಾವ್ ವಂದಿಸಿ, ಶ್ರೀ ಎಂ.ಕೆ.ದಿವಾಕರ ರಾವ್ ಸಂಘಟಿಸಿ, ಶ್ರೀ ಅರುಣ್ ರಾವ್ ಕಾರ್ಯಕ್ರಮ ನಿರೂಪಿಸಿದರು. ನಿರ್ದೇಶಕರು ಸಹಕರಿಸಿದರು. ಕೊನೆಗೆ ಸಭೆಯು ಉಪಹಾರದೊಂದಿಗೆ ಕೊನೆಗೊಂಡಿತು.

**ವರದಿ : ರಮ್ಯಾ ರಾವ್ ಕಾರ್ಯದರ್ಶಿ**
**ಶ್ರೀ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ**

ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಕೊರೊನ ತೃತೀಯ ಅಲೆಯ ಆಗಮನದ ಹಿನ್ನೆಲೆಯಲ್ಲಿ ವೈದ್ಯಮಿತ್ರನ ಸಲಹೆಗಳು....

–ಡಾ। ವೈ.ಸುದರ್ಶನ ರಾವ್

**ಕೊರೊನ ಸಾಂಕ್ರಾಮಿಕದ ಎರಡನೆಯ ಅಲೆಯ ಹೊಡೆತಕ್ಕೆ ನಲುಗಿರುವ ಭಾರತವು ಮೂರನೆಯ ಅಲೆಯ ಬಗ್ಗೆ ಆತಂಕದಲ್ಲಿದೆ. ಈ ಹಿನ್ನೆಲೆಯಲ್ಲಿ ಕೆಲವು ಗೇಮ್‌ಚೇಂಜರ್ ಸಲಹೆಗಳು.**

(1) ಫ್ಲೂ ಅಥವಾ ಅನಾರೋಗ್ಯದ ಯಾವುದೇ ಲಕ್ಷಣಗಳು ಕಂಡುಬಂದಾಗ ಮೊದಲನೆಯ ದಿನವೇ ಅಥವಾ ಎರಡನೆಯ ದಿನವಾದರೂ ಕೋವಿಡ್ ಪರೀಕ್ಷೆ ಮಾಡಿಸಿ (ಫ್ಲೂ ಜ್ವರ ಒಂದೇ ದಿನದಲ್ಲಿ ಗುಣವಾಗಿದ್ದರೂ ಸಹಾ). ಇದರಿಂದ ನಿಮಗೆ ನಿಮ್ಮ ಆರೋಗ್ಯದ ಬಗ್ಗೆ ಸಕಾಲದಲ್ಲಿ ಮುಂಜಾಗ್ರತೆವಹಿಸಲು ಅನುಕೂಲವಾಗುವುದರ ಜೊತೆಗೆ ನಿಮ್ಮಿಂದ ಇತರರಿಗೆ ರೋಗ ಹರಡುವುದನ್ನು ತಪ್ಪಿಸಬಹುದು, ಒಂದು ವೇಳೆ ನಿಮ್ಮ ಆರೋಗ್ಯ ಹದಗೆಟ್ಟಲ್ಲಿ ನೀವು ಕೋವಿಡ್ ಪರೀಕ್ಷೆಯ ಫಲಿತಾಂಶಕ್ಕಾಗಿ ವ್ಯರ್ಥವಾಗುವ ಒಂದೆರಡು ಅಮೂಲ್ಯ ದಿನಗಳನ್ನು ಉಳಿಸಬಹುದು.

(2) ಒಂದು ವೇಳೆ ನಿಮ್ಮ ಕೋವಿಡ್ ಪರೀಕ್ಷೆಯ ಪಲಿತಾಂಶ ಪೊಸಿಟಿವ್ ಬಂದರೆ, ಈ ಖಾಯಿಲೆಯ ಮೊದಲನೆಯ ವಾರದಲ್ಲಿ ಲಕ್ಷಣಗಳು ಸೌಮ್ಯವಾಗಿರುವುದರಿಂದಲೂ ಹಾಗೂ ಆ ದಿನಗಳಲ್ಲಿ ಯಾವುದೇ ಔಷಧೀಯ ಚಿಕಿತ್ಸೆ ಅಗತ್ಯವಾಗಿಲ್ಲವಾದುದರಿಂದಲೂ ನೀವು ಮನೆಯಲ್ಲಿ ಉಳಿಯಿರಿ. ನಿಮಗೆ ಖಾಯಿಲೆಯ ಯಾವುದೇ ಲಕ್ಷಣವಿಲ್ಲದಿದ್ದರೂ ಕೂಡಾ ಸಂಪೂರ್ಣ ವಿಶ್ರಾಂತಿ ಪಡೆಯಿರಿ. ದಿನಕ್ಕೆ ಎಂಟರಿಂದ ಹತ್ತು ಗಂಟೆ ನಿದ್ದೆ ಮಾಡಿರಿ. ಪೌಷ್ಟಿಕ ಆಹಾರ ಸೇವಿಸಿರಿ. ಮದ್ಯಪಾನ ಧೂಮಪಾನ ನಿಲ್ಲಿಸಿರಿ. ನಿಮಗೆ ಡಯಾಬಿಟಿಸ್ ಬ್ಲಡ್ ಪ್ರೆಶರ್ ಇತ್ಯಾದಿ ಖಾಯಿಲೆ ಇದ್ದರೆ ಅದರ ತಪಾಸಣೆ ಮಾಡಿ ಅದನ್ನು ತಹಬಂದಿಗೆ ತಂದಿಟ್ಟಿರಿ. ಸಾಕಷ್ಟು ನೀರು ಕುಡಿಯಿರಿ. ಲಘು ವ್ಯಾಯಾಮ, ಪ್ರಾಣಾಯಾಮ ಒಳ್ಳೆಯದು. ಯಾವುದೇ ದೈಹಿಕ ಚಿಹ್ನೆಗಳಿಲ್ಲದಿದ್ದರೂ ಕೂಡಾ ಕನಿಷ್ಟ ಹತ್ತು ದಿನಗಳನ್ನು ಹೀಗೆ ಮನೆಯಲ್ಲಿ ಕಳೆಯಿರಿ. ಈ ರೀತಿ ಮಾಡುವುದರಿಂದ ನಿಮ್ಮ ಖಾಯಿಲೆ ವಿಷಮಿಸದೇ ಅಲ್ಲಿಯೇ ಗುಣವಾಗಿಬಿಡುತ್ತದೆ. ಕೋವಿಡ್ ಪರೀಕ್ಷೆ ಮಾಡಿಸದೆ ಇತರ ಫ್ಲೂ ಜ್ವರಗಳು ಬಂದಾಗ ನಾವು ಇಲ್ಲಿಯ ತನಕ ಮಾಡುತ್ತಿದ್ದಂತೆ ನಿತ್ಯವ್ಯವಹಾರ ಕೆಲಸಗಳನ್ನು ಮುಂದುವರಿಸಿದಲ್ಲಿ (ಲಾಕ್ ಡೌನ್ ಇಲ್ಲದಿರುವುದರಿಂದ) ಇಂತಹವರಿಗೆ ಸುಮಾರು ಏಳರಿಂದ ಹತ್ತನೆಯ ದಿನಗಳಲ್ಲಿ ಒಂದೊಂದಾಗಿ ತೀವ್ರ ಚಿಹ್ನೆಗಳು ಆರಂಭವಾಗುತ್ತದೆ. ಇಂತಹವರಿಗೆ ಆಕ್ಸಿಜನ್, ಐಸಿಯು ಚಿಕಿತ್ಸೆ ಬೇಕಾಗುತ್ತದೆ.

(3) ಪೊಸಿಟಿವ್ ರಿಪೋರ್ಟ್ ಬಂದಾಕ್ಷಣ ಕಷ್ಟಕಾಲದಲ್ಲಿ ಸಹಾಯಕ್ಕೆ ಬರಬಲ್ಲ ಬಂಧುಮಿತ್ರರಿಗೆ ವಿಷಯ ತಿಳಿಸಿರಿ.

(4) ಯಾವುದಾದರೂ ಕೋವಿಡ್ ಚಿಕಿತ್ಸೆ ನೀಡುವ ಆಸ್ಪತ್ರೆಯ ವೈದ್ಯರೊಂದಿಗೆ ಸಂಪರ್ಕದಲ್ಲಿರಿ. ಅನಗತ್ಯ ವಾದ ಮಾಡದೆ ಅವರ ಸೂಚನೆಗಳನ್ನು ಪಾಲಿಸಿ.ಅವರು ಸೂಚಿಸಿದ ಚಿಕಿತ್ಸೆ ಅಥವಾ ಪರೀಕ್ಷೆಗಳನ್ನು ಮಾಡಿಸಿ. ದೈಹಿಕ ಪರಿಸ್ಥಿತಿ ಬಿಗಡಾಯಿಸಿದಲ್ಲಿ ಈ ಸಂಪರ್ಕ ನಿಮಗೆ ತುರ್ತು ಚಿಕಿತ್ಸೆ ಒದಗಿಸುವಲ್ಲಿ ಸಹಕಾರಿಯಾಗುತ್ತದೆ.

(5) ಸೂಚನೆ ಒಂದು ಹಾಗೂ ಎರಡನ್ನು ನೀವು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ನಿಮ್ಮ ದೈಹಿಕ ಪರಿಸ್ಥಿತಿ ಬಿಗಡಾಯಿಸುವ ಸಾಧ್ಯತೆ ಅತೀ ಅಲ್ಪ ಪ್ರಮಾಣಕ್ಕಿಳಿಯುತ್ತದೆ. ನೀವು ಟಿವಿಯಲ್ಲಿ ನೋಡುತ್ತಿದ್ದ ಹಾಹಾಕಾರದ ಪ್ರಕರಣಗಳೆಲ್ಲವೂ ಫ್ಲೂ ಲಕ್ಷಣ ತೋರಿ ಬಂದು ಕನಿಷ್ಟ ಹತ್ತು ದಿನಗಳನ್ನು ವ್ಯರ್ಥ ಕಾಲಹರಣ ಮಾಡಿದವರೇ ಆಗಿದ್ದಾರೆ.

(6) ಯಾವತ್ತೂ ಸ್ವಯಂ ಚಿಕಿತ್ಸೆ ಮಾಡಬೇಡಿ. ಕೊರೊನಾ ವ್ಯಾಕ್ಸಿನ್‌ನನ್ನು ತಪ್ಪದೇ ತೆಗೆದುಕೊಳ್ಳಿ. ಮಾಸ್ಕ್ ಸ್ಯಾನಿಟೈಸರ್ ಮುಂತಾದ ಕೊರೊನಾ ಮಾರ್ಗಸೂಚಿಗಳನ್ನು ಇನ್ನು ಮುಂದೆಯೂ ಪಾಲಿಸಿ. ಜನರ ಗುಂಪಿನಿಂದ ದೂರವಿರಿ

(7) ಮೂರನೇ ಅಲೆ ಮಕ್ಕಳ ಮೇಲೆ ಇರಬಹುದು ಅನ್ನುವ ವರದಿಗಳಿವೆ. ಆದರೆ ಅದಕ್ಕೆ ಯಾವುದೇ ಆಧಾರಗಳಿಲ್ಲ. ಆದುದರಿಂದ ಮುಂಜಾಗ್ರತೆ ವಹಿಸುವುದನ್ನು ಬಿಟ್ಟು ಅನ್ಯ ಮಾರ್ಗವಿಲ್ಲ. ಗಾಳಿ ಸುದ್ದಿಗಳಿಗೆ ಕಿವಿಗೊಡಬೇಡಿ ಹಾಗೂ ಹರಡಿಸಬೇಡಿ. ಸರಕಾರದಿಂದ ಅಧಿಕೃತ ಮಾಹಿತಿಯನ್ನು ಮಾತ್ರಾ ನಂಬಿ.

ಎರಡನೆಯ ಅಲೆ ಇಳಿದಮೇಲೂ ಮೂರನೆಯ ನಾಲ್ಕನೆಯ ಅಥವಾ ಹತ್ತು ಹನ್ನೆರಡು ಅಲೆಗಳ ತನಕವೂ ಬರಬಹುದು ಅಥವಾ ಕೋವಿಡ್ ಕಾಯಿಲೆ ಖಾಯಂ ಆಗಿಯೇ ಉಳಿಯಬಹುದು. ಯಾವ ಅಲೆಯಲ್ಲಿ ಯಾವುದರ ಕೊರತೆ ಕಾಡೀತು ಎಂದು ಅಂದಾಜಿಸುವುದು ಕಷ್ಟ. ಹಾಗೆಯೇ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಆಸ್ಪತ್ರೆ ಐಸಿಯುಗಳನ್ನು ಕಟ್ಟಿಸಿದರೆ ಅವು ಮುಂದೆ ಯಾವ ಉಪಯೋಗಕ್ಕೂ ಸಲ್ಲವು. ಆರು ತಿಂಗಳಿಗೊಮ್ಮೆ ಲಾಕ್ ಡೌನ್ ಮಾಡಿದರೆ ಜೀವನ ದುಸ್ತರವಾಗುವುದು. ಆದುದರಿಂದ ಮುಂದಿನ ಅಲೆಗಳು ಬರದಂತೆಯೂ ಬಂದರೂ ಸೌಮ್ಯವಾಗಿರುವಂತೆಯೂ ಮಾಡುವುದೇ ಸರಿಯಾದ ಕ್ರಮ. ಆದುದರಿಂದ ಜನರು ಕೋವಿಡ್ ಬರದಂತೆ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಬೇಕು.

ಸರಕಾರವು ಧಾರ್ಮಿಕ ಕಾರ್ಯಕ್ರಮಗಳು, ರಾಲಿ, ಪ್ರತಿಭಟನೆ, ಹಾಗೂ ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ಇರುವ ಜನರ ಮಿತಿಯನ್ನು ಕನಿಷ್ಟ ಇನ್ನೂ ಎರಡು ವರ್ಷಗಳ ಕಾಲ ಹಿಂತೆಗೆದುಕೊಳ್ಳಬಾರದು. ಬಸ್ ಸ್ಟಾಂಡ್‌ಗಳಲ್ಲಿ ಪೋಲೀಸರನ್ನು ನಿಯೋಜಿಸಿ ಬಸ್ಸುಗಳಲ್ಲಿ ನಿಗದಿತ ಜನರಷ್ಟೇ ಹತ್ತುವಂತೆ ನೋಡಬೇಕು. (ಪ್ರಯಾಣದ ದರ ಹೆಚ್ಚಿಸಬಹುದು)

ಮಾರುಕಟ್ಟೆಗಳಿಗೆ ಜನಸಾಮಾನ್ಯರ ಪ್ರವೇಶ ನಿರ್ಭಂಧಿಸಿ ಕೇವಲ ವ್ಯಾಪಾರಿಗಳಿಗೆ ಮಾತ್ರಾ ಪ್ರವೇಶಿಸಲು ಅನುಮತಿ ನೀಡಬೇಕು. ತರಕಾರಿ ಮಾಂಸ ಹಾಲು ಇತ್ಯಾದಿ ಅಂಗಡಿಗಳು ಇನ್ನಷ್ಟು ವಿಕೇಂದ್ರೀಕರಣಗೊಂಡು ವಾರ್ಡು ವಾರ್ಡುಗಳು ಹಾಗೂ ರಸ್ತೆಬೀದಿಗೊಂದರಂತೆ ಇಂತಹಾ ಅಂಗಡಿಗಳನ್ನು ತೆರೆಯಬೇಕು ಆವಾಗ ಮಾರ್ಕೇಟುಗಳಲ್ಲಿ ಹಾಗೂ ಅಂಗಡಿಗಳ ಮುಂದೆ ಜನಸಂದಣಿ ತಪ್ಪುತ್ತದೆ

ಜನಸಂದಣಿಯಾಗುವ ಯಾವುದೇ ವ್ಯವಹಾರಕ್ಕೆ ಇನ್ನೆರಡು ವರ್ಷ ನಿರ್ಬಂಧ ಹೇರಬೇಕು. ಜನಸಂದಣಿಯಾಗದ ವಹಿವಾಟುಗಳನ್ನು ಉತ್ತೇಜಿಸಬೇಕು.


ಶುಭಾಶಯಗಳೊಂದಿಗೆ

ಡಾ। ವಿಜಯಾ ರಾವ್ ವೈ.ಬಿ

ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)

ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು



ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ

ಫೋನ್ : 9448164327

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ


ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

With Best Compliments From :


BUILDING DREAMS, ENHANCING LIVES.



NAKSHATRA — GANDHINAGAR —



SOLITAIRE — HATHILL, —



HABITAT ONE 54 An Urban Lifestyle — DEREBAIL —



ANANTESSH — CAR STREET, —

Land Trades® BUILDERS & DEVELOPERS

BUILDING TRUST, DELIVERING VALUE

MANGALURU'S LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :

# ಮರೆಯಲಾಗದ ಮಹನೀಯರು (ನೆನಪಿನಂಗಳದ ತುಣುಕುಗಳು)

ಲೇಖಕ : ಜಿ.ಕೆ. ಕೋಲ್ಪೆ

ಅದೊಂದು ದಿನ ಹೆಸರಾಂತ ದೈನಿಕ ಪತ್ರಿಕೆಯೊಂದನ್ನು ತಿರುವುತ್ತಾ ನನ್ನ ದೃಷ್ಟಿ "ಮರೆಯಲಾಗದ ಮಹನೀಯರು" ಎಂಬ ಶೀರ್ಷಿಕೆಯತ್ತ ಬಿತ್ತು. ಭಾವಚಿತ್ರಗಳ ಸಹಿತ 'ಮರೆಯಾದ' ಆ ಮಹನೀಯರ ಗುಣಗಾನ ಮಾಡಲಾಗಿತ್ತು. ಯಕ್ಷಲೋಕ, ಕ್ರೀಡಾಕ್ಷೇತ್ರ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ನಾಡು ಕಳಕೊಂಡವರ ಸಂಖ್ಯೆ ಸುಮಾರು 50-60 ಮಂದಿಯಲ್ಲಿ, "ನಿಧನರಾದದ್ದು, ಇಹಲೋಕ ತ್ಯಜಿಸಿದ್ದು, ವಿಧಿವಶರಾದದ್ದು, ಅಸ್ತಂಗತರಾದದ್ದು, ವಿಷ್ಣುಪಾದ-ಶಿವಪಾದ ಸೇರಿದ್ದು, ಲಿಂಗೈಕ್ಯರಾದದ್ದು "ಇತ್ಯಾದಿ ಅಂದರೆ ಈ ಪುಣ್ಯಭೂಮಿಗೆ ವಿದಾಯ ಹೇಳಿದವರ ಸಾಧನೆ, ಆದರ್ಶ ಜೀವನ ಹಾಗೂ ದೇಶಕ್ಕೆ ಅವರ ಕೊಡುಗೆಯನ್ನು ಸ್ಮರಿಸಿದ್ದು ಸಮಯೋಚಿತವಾಗಿತ್ತು. ಅಂತಹವರು 'ಮರೆಯಲಾಗದವ'ರಾಗುತ್ತಾರೆ.

ಇನ್ನೊಂದು ವರ್ಗವೂ ಇದೆ. ಇದನ್ನು ನೆನಪಿಸಿದವ ನನ್ನ ಹಳೇ ಸ್ನೇಹಿತ ಗದಗಿನ 'ವಾಚಾಳಿ ವೀರಣ್ಣ'. ಸುಮಾರು 4-5 ತಿಂಗಳ ಹಿಂದೆ ಉಡುಪಿ ಪ್ರವಾಸಕ್ಕೆ ಬಂದವ ಮೊದಲೇ ತಿಳಿಸಿದಂತೆ ಭೇಟಿಯಾದ. ಈ ಹಿಂದೆ ಬಯಲು ಸೀಮೆಯ ಬೆಳ್ಳಿಹಟ್ಟಿಯ ಬ್ಯಾಂಕ್ ಶಾಖೆಯಲ್ಲಿ ಜೊತೆಗಿದ್ದೆವು. ಒಳ್ಳೆಯ ಕೆಲಸಗಾರ. ಅಲ್ಲಿ ಅವನ ಸಂಬಂಧಿಕರೂ ಇದ್ದಾರೆ. ಉಭಯಕುಶಲೋಪರಿ ಮಾತಾಡುತ್ತಾ, 'ಸಾರ್, ನಮ್ಮ ಬ್ಯಾಂಕ್ ಸಾಲವಸೂಲಿಗೆ ಬಹಳ ತ್ರಾಸಕೊಟ್ಟು ಗೂಂಡಾಗಿರಿ ಮಾಡುತ್ತಿದ್ದ ಕೊಟ್ಟೂರ ಕೊಟ್ರೇಶಿ ಇತ್ತೀಚೆಗೆ "ನೆಗೆದುಬಿದ್ದು ಹೋದ"ಎಂದ. ಆ ದಿನಗಳನ್ನು ನೆನಪಿಸಿಕೊಂಡು, "ಸರಿಯಾದ ಶಬ್ದ ಪ್ರಯೋಗ ಮಾಡಿದ್ದೀಯಪ್ಪಾ, ಏನಾಗಿತ್ತು?" ಎಂದೆ. "ಕೋವಿಡ್ ವಕ್ಕರಿಸಿ ಹೊಗೆಹಾಕಿಸಿಕೊಂಡ ಸಾರ್" ಎಂದ. ಘಟ್ಟ ಪ್ರದೇಶ, ಬಯಲುಸೀಮೆಯಲ್ಲಿ ಕುಖ್ಯಾತರು ಸತ್ತಲ್ಲಿ, "ಎಕ್ಕುಟ್ಟಿಹೋದ, ಸೆಟ್ಕೊಂಡ, ನೆಲಕಚ್ಚಿದ, ನೆಗೆದುಬಿದ್ದು ಹೋದ, ಹೊಗೆಹಾಕಿಸಿಕೊಂಡ" ಇತ್ಯಾದಿ ಗುಣವಿಶೇಷಣಗಳನ್ನು ಬಳಸುವುದು ಸಾಮಾನ್ಯ. ಇಂತಹವರು ಮರೆಯಾದರೂ 'ಮರೆಯಲಾಗದವ'ರಾಗುತ್ತಾರೆ. ಅನಂತರ ಅವನೊಡನೆ ನನ್ನ ನೆನಪಿಗೆ ಬಂದ ಆ ಹಳ್ಳಿಯ ಕೆಲವು ಹಿರಿಯ ವ್ಯಕ್ತಿಗಳ ಬಗ್ಗೆ ವಿಚಾರಿಸಿದೆ. "ಸಾಮಿಲ್ ಗೌಡರು ಜನಪಾದ ಸೇರಿದರು, ಶೇಂಗಾ ಸಗಟು ವ್ಯಾಪಾರಿ ಮಹಾಂತಪ್ಪರು ಶಿವೈಕ್ಯರಾದರು. ಮಾಸ್ತರ್ ಕುಲಕರ್ಣಿಯವರು ಹಾಗೂ ಹೋಟೆಲ್ ವೆಂಕಟ್ರಾಯರು ಹರಿಪಾದ ಸೇರಿದರು" ಎನ್ನುತ್ತಾ ಇವರೆಲ್ಲಾ ನಿಮ್ಮ ಅಭಿಮಾನಿಗಳು ಸಾರ್, ಒಳ್ಳೆಯ ಬದುಕು ಕಟ್ಟಿಕೊಂಡು ಬಡಬಗ್ಗರಿಗೆ ಸಹಾಯ ಮಾಡಿದವರು ಅಲ್ಲದೆ ನಮ್ಮ ಬ್ಯಾಂಕಿನ ಉತ್ತಮ ಗ್ರಾಹಕರಾಗಿದ್ದವರು. ಅವರ ಮಕ್ಕಳು ಈಗಲೂ ನಮ್ಮಲ್ಲೇ ವ್ಯವಹರಿಸುತ್ತಿದ್ದಾರೆ ಸಾರ್" ಎಂದ. ಬ್ಯಾಂಕಿಗೆ ಹಾಗೂ ಮನೆಗೆ ಕುಡಿಯುವ ನೀರು ತರುತ್ತಿದ್ದ ರಾಮೋಜಿ ಹಾಗೂ ನಮ್ಮನ್ನು ಬಹಳ ಹಚ್ಚಿಕೊಂಡಿದ್ದ ಮನೆ ಕೆಲಸದ ಹನುಮಪ್ಪನ ಭಕ್ತೆ "ಸ್ಯಾಬ್ರಹೆಂಗಸು ಮೋದಿನವ್ವ" ಇನ್ನೂ ಇದ್ದಾರಾ? "ಇಲ್ಲ ಸರ್, ಅದಾಗಲೇ ಕಣ್ಮುಚ್ಚಿದ್ದಾರೆ ಸಾರ್" ಎಂದ. "ಸಾರ್, ನಿಮ್ಮನ್ನು ಈಗಲೂ ಬೆಳ್ಳಿಹಟ್ಟಿಯ ಹಿರಿಯ ಮಂದಿ ನೆನಪಿಸುತ್ತಾರೆ. ನೀವು ವರ್ಗವಾಗಿ ಹೊರಟಾಗ, ಸುಗನಹಳ್ಳಿಯ ಕುರುಬರು ಬಂದು ಕಂಬಳಿ ಹೊದಿಸಿ, ಕಾಲಿಗೆ ಅಡ್ಡಬಿದ್ದು, ಬಸ್ ಹತ್ತಿಸಿದ್ದು ನಾನು ಈಗಲೂ ಮರೆತಿಲ್ಲ" ಎಂದ. "ಸಾಕು ಮಾರಾಯ, ಹೊಗಳಿ ಹೊನ್ನ ಶೂಲಕ್ಕೆ ಏರಿಸಬೇಡ. ನಿಮ್ಮೆಲ್ಲರ ಸಹಕಾರದಿಂದ ನನ್ನ ಕರ್ತವ್ಯ ಮಾಡಿದ್ದೆ ಕಣಯ್ಯ, ಇನ್ನೇನಿಲ್ಲ" ಎಂದೆ. "ಸಾರ್, ನನಗೂ 63 ದಾಟಿತು. ಇನ್ನೊಬ್ಬ ಮಗಳ ಲಗ್ನ ಮುಗಿಸಿ ನಿಶ್ಚಿಂತೆಯಾಗಿ ಗದುಗಪ್ಪನ (ಗದಗಿನ ವೀರ ನಾರಾಯಣ ಸ್ವಾಮಿ ದೇವರು) ಪಾದ ಸೇರಿದರೆ ಸಾಕು" ಎಂದ. ಮುಂದುವರಿಸುತ್ತಾ "ಸಾರ್, ನೀವು ಕೂಡಾ 80ರ ಆಜು-ಬಾಜು ಇದ್ದೀರಿ, ಸೆಂಚುರಿ ಬಾರಿಸಿ ಸಾರ್" ಎಂದ. ಇವತ್ತು ನನ್ನ ಮಗಳು ತಯಾರಿಸಿದ "ಗೋಬಿ ಮಂಚೂರಿಯನ್" ಬಾರಿಸಿ ಆ ಮೇಲೆ ಸೆಂಚುರಿ ಬಗ್ಗೆ ಯೋಚಿಸುತ್ತೇನೆ., ಈಗ ಸಮೀಪದ 'ಮಿತ್ರದರ್ಶಿನಿ'ಗೆ ನಡಿ. ನನ್ನ ಲೆಕ್ಕದಲ್ಲಿ ಉಡುಪಿ ಸ್ಪೆಷಲ್ ಗೋಳಿಬಜೆ-ಬನ್ಸ್ ತಿಂದು, ಚಾ ಕುಡಿದು ಬಸ್ ಹತ್ತು ಪುಣ್ಯಾತ್ಮ" ಎಂದೆ. ಚಾಯ್ ಪಾರ್ಟಿ ಮುಗಿಸುತ್ತಾ, 'ಅಕ್ಕಾವ್ರಿಗೆ ನನ್ನ ನಮಸ್ಕಾರ ತಿಳಿಸಿ ಸಾರ್. ಅವರು ತಯಾರಿಸಿ ಆಗಾಗ ಬ್ಯಾಂಕ್ ಸಿಬ್ಬಂದಿಗಳಿಗೆ ಬಡಿಸುತ್ತಿದ್ದ ಇಡ್ಲಿ-ಸಾಂಬಾರ್, ನೀರ್ ದೋಸೆ, ಪತ್ರೋಡೆ ಇತ್ಯಾದಿ ತಿನ್ನುತ್ತಿದ್ದ ನಾವು ಪುಣ್ಯವಂತರು. ಆ ಅನ್ನಪೂರ್ಣೇಶ್ವರಿಯನ್ನು ಮರೆಯಲು ಅಸಾಧ್ಯ ಸಾರ್" ಎನ್ನುತ್ತಾ ಹೊರಟು ನಿಂತ. "ಇನ್ನೊಮ್ಮೆ ಉಡುಪಿಗೆ ಬಂದಾಗ ನನ್ನ ಮನೆಗೆ ಖಂಡಿತ ಬಾರಯ್ಯಾ, ಬದುಕುಳಿದರೆ ಭೇಟಿಯಾಗೋಣ"! ಎಂದೆ, ಅವನ ಸಪ್ಪೆ ಮುಖ ಕಂಡು ಹಿಂದಿನ "ನೆನಪುಗಳು" ಮರುಕಳಿಸಿ ಕಣ್ಣುಮಂಜಾಯ್ತು!

ಪ್ರತಿಯೊಬ್ಬರ ಬದುಕಿನುದ್ದಕ್ಕೂ ಅನುಭವಿಸುವ ಸಿಹಿ/ಕಹಿಗಳು ಜೀವನ ಸಾರ್ಥಕತೆಯತ್ತ ಸಾಗುತ್ತದೆ. ಅದನ್ನು ಪ್ರಕಟಪಡಿಸಿದರೆ ಇತರರಿಗೆ ಮಾರ್ಗದರ್ಶನವಾಗುತ್ತದೆ. ಮುಗಿಸುವ ಮುನ್ನ, ಜೀವಿತಾವಧಿಯಲ್ಲಿ ಸಮಾಜ ಸ್ಮರಿಸುವಂತಹ ಉತ್ತಮ ಸೇವೆ ಮಾಡಿ "ಮರೆಯಲಾಗದ ಮಹನೀಯರಾಗೋಣ!"

# ಜಗದ್ಗುರುಗಳ ವರ್ಧಂತ್ಯುತ್ಸವ



ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ತಾ.18.04.2021ರಂದು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವ ಆಚರಣೆ ಹಾಗೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ, ಸಾಮೂಹಿಕ ಲಕ್ಷ ಕುಂಕುಮಾರ್ಚನೆ, ಶ್ರೀ ರಾಮ ದೇವರಿಗೆ ಅಭಿಷೇಕ ಮತ್ತು ಕಲ್ಪೋಕ್ತ ಪೂಜೆ ನೆರವೇರಿತು.

## ಪುರಾತನ ಶಿವ ಸಾನಿಧ್ಯ ಪತ್ತೆ



ಜೈನರ ಆಡಳಿತ ಕಾಲಕ್ಕೂ ಹಿಂದಿನ, ಚೇರ್ಕಾಡಿ ಗ್ರಾಮಕ್ಕೆ ಸಂಬಂಧ ಪಟ್ಟ ಶಿವ ಸಾನಿಧ್ಯವು, ಚೇರ್ಕಾಡಿ ಗ್ರಾಮದ ಕಂಬಳಗದ್ದೆ ಸಮೀಪ, ಶಾನುಭೋಗರಬೆಟ್ಟಿನಲ್ಲಿ ಪತ್ತೆಯಾಗಿದ್ದು ಅದರ ಸಮಗ್ರ ಜೀರ್ಣೋದ್ಧಾರ ಆಗಬೇಕಾಗಿದೆ. ಸಮಾಜಬಾಂಧವರು ಗ್ರಾಮಸ್ಥರು ಭಕ್ತಾದಿಗಳು ಈ ಕೈಂಕರ್ಯದಲ್ಲಿ ಕೈಕೂಡಿಸಲು ಶ್ರೀ ವಿಷುರಾವ್ ಹಾವಂಜೆ (9880052105) ಇವರು ಕರೆ ನೀಡಿರುತ್ತಾರೆ.

ಕವನ

## ಹ್ಯಾಂಗ ಮರೆಯಲಿ

ಹ್ಯಾಂಗ ಮರೆಯಲಿ ನಿನ್ನ ನಾನು
ಮರೆಯುವ ಮಾತೇ ನಿಜವಾಯಿತು
ನಿಜವೆಂದರೆ ಅದು ಸುಳ್ಳಲ್ಲವೇನೆ
ನಮ್ಮಿಬ್ಬರ ವಿಧಿ ಹಗೆಯಾಯಿತು ?
ಕೊಟ್ಟ ಪ್ರೀತಿಗೆ ಕೊನೆಯಿರಲು
ದಿಟ್ಟೆ ಯಾದೆಯನ್ನ ಮರೆಯುವಲ್ಲಿ
ಪುಟ್ಟ ಮುಖದೊಳಗಾಡಿದ ಆಣೆಯ
ಯಾವ ಪುಟ ತೆರೆದು ಬರೆದಿದಲಿ
ಕೆನ್ನೆಗೂ ಗಲ್ಲಕು ನಡುವಿರುವಂತ
ಮುತ್ತಿಗೇನೆ ಕಳಂಕವು
ಮೈಲಿಗೆಯಲ್ಲಿ -ನಿಗಾಯಿಡೆ ಇಲ್ಲಿ
ಪ್ರೀತಿಯು ಘೋಷಣೆಗೆ ಮಾನ್ಯ,
ಆಚರಿಸಲು ಅದು ಬರಿ ಶೂನ್ಯ.
ನನ್ನಗೇ ನನ್ನಯ ಪ್ರೀತಿಯು ಸಾಕೇ?
ನಾಳೆಗೆ ಬೇಡವೆ ನೀ ಹೇಳೆ !
ಬೇಡವೆನ್ನುವುದಾದರೆ ನಾ ಹೋಗುವೆನು
ಎಲ್ಲಿಗೆಂದು ಕೇಳದಿರು.

-ಎಂ.ಗಣೇಶ್ ರಾವ್, ಬಾರಕೂರು

## ವಿಳಾಸ ಬದಲಾವಣೆ

ನೌಕಾದಳದಲ್ಲಿ ಚೀಫ್ ಕಮಾಂಡರ್ ಆಫ್ ನೇವಲ್ ಸ್ಟಾಫ್ ಆಗಿರುವ ಶ್ರೀ ಅಶ್ವಿನ್ ಎಂ.ರಾವ್ ಇವರು ಕೊಚ್ಚಿಯಿಂದ ಬೆಂಗಳೂರಿಗೆ ವರ್ಗಾವಣೆಯಾಗಿದ್ದಾರೆ. ಇವರ ನೂತನ ವಿಳಾಸ :

ಕಮಾಂಡರ್ ಅಶ್ವಿನ್ ಎಂ.ರಾವ್
E31/2, ಡಿ.ಆರ್.ಡಿ.ಓ. ಟೌನ್‌ಶಿಪ್ ಆಫೀಸ್-2,
ಸಿ.ವಿ.ರಾಮನ್ ನಗರ, ಬೆಂಗಳೂರು-93

-: ಶುಭಾಶಯಗಳು :-
"ಶ್ರೀ ಶಾರದಾಂಬೆಗೆ ವಂದಿಸುತ್ತಾ
"ಶ್ರೀ ಶಾರದಾ" ಪತ್ರಿಕೆಯು ನವರಸಭರಿತಳಾಗಿ ಸಮಾಜಕ್ಕೆ
ದಾರಿದೀಪವಾಗಲಿ" ಎಂದು ಹಾರೈಸುವ
ಜಿ.ಕೆ.ಕೋಲ್ಪೆ, ಉಡುಪಿ
ಮಹಾಪೋಷಕರು, ಶ್ರೀಶಾರದಾ ಪತ್ರಿಕೆ ಹಾಗೂ ಮಾಜಿ ಉಪಾಧ್ಯಕ್ಷರು,
ಶ್ರೀ ಸ್ಥಾನಿಕ ಬ್ರಾಹ್ಮಣಮಹಾಮಂಡಲ

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

With Best Complimemts From
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655

Buying and selling shares
as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com

## ನಿಧನ

### ಪಡುಬೆಳ್ಳೆ ವಾಮನ ರಾವ್



ಬ್ರಹ್ಮಾವರ ತಾಲೂಕು ಹೆಗ್ಗುಂಜೆ ಗ್ರಾಮದ ಜಾನುವಾರುಕಟ್ಟೆಯಲ್ಲಿ ವಾಸ್ತವ್ಯದಲ್ಲಿದ್ದ ಪಡುಬೆಳ್ಳೆ ವಾಮನ ರಾವ್ (53 ವರ್ಷ) ಅಲ್ಪಕಾಲದ ಅಸೌಖ್ಯದಿಂದ ತಾ.20.6.2021ರಂದು ಮಣಿಪಾಲದ ಆಸ್ಪತ್ರೆ ಯಲ್ಲಿ ನಿಧನರಾದರು. ದಿ| ಪಡುಬೆಳ್ಳೆ ದೇವ ರಾವ್ ಹಾಗೂ ದಿ| ದೇವಕೀ ದೇವರಾವ್ ದಂಪತಿಗಳ ಪುತ್ರರಾದ ವಾಮನ ರಾವ್ ಪತ್ನಿ, ಪುತ್ರಿ, 7 ಜನ ಸಹೋದರರು, ಮೂವರು ಸಹೋದರಿಯರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ. ಇತಿಹಾಸದಲ್ಲಿ ಸ್ನಾತಕೋತ್ತರ ಪದವೀಧರರಾದ ಮೃತರು ಮುನಿಯಾಲಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಲವು ವರ್ಷ ಪ್ರಾಧ್ಯಾಪಕರಾಗಿ ಸೇವೆಯಲ್ಲಿದ್ದರು. ನಂತರ ತನ್ನ ಸಹೋದರ ಶ್ರೀ ಸದಾಶಿವ ರಾವ್ ಅವರೊಂದಿಗೆ ಸೇರಿ ಮಂಗಳೂರಿನಲ್ಲಿ "ಎಸ್.ವಿ.ಸೇನಿಟೇಶನ್ "ಸಂಸ್ಥೆಯನ್ನು ಪ್ರಾರಂಭಿಸಿ ಯಶಸ್ಸನ್ನು ಸಾಧಿಸಿದ್ದಲ್ಲದೆ ಹತ್ತಾರು ಮಂದಿಗೆ ಉದ್ಯೋಗಧಾತರೆನಿಸಿದ್ದರು.

**** ****

### ಶ್ರೀ ಕೋರೆಗಾವ್ ಸುಬ್ಬರಾವ್



ಶ್ರೀ ಕೋರೆಗಾವ್ ಸುಬ್ಬರಾವ್ ಇವರು ತಾ.20.04.2021 ರಂದು ಕೋರೆಗಾವನಲ್ಲಿ ನಿಧನ ಹೊಂದಿದರು. ಪರೋಪಕಾರಿ ಕೊಡುಗೈ ದಾನಿಯಾಗಿದ್ದ ಇವರು ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿದ್ದರು.

**** ****

### ಶ್ರೀ ನೆಲ್ಲಕುಂಜೆ ಸುಬ್ಬರಾವ್



ನೆಲ್ಲಕುಂಜೆ ನಿವಾಸಿ ಶ್ರೀ ನೆಲ್ಲಕುಂಜೆ ಸುಬ್ಬರಾವ್ ತಾ.02.05.2021 ರಂದು ನಿಧನ ಹೊಂದಿದರು.

**** ****

### ಕೆ. ಸುರೇಶ ರಾವ್



ಉಡುಪಿ ಕುಕ್ಕಿಕಟ್ಟೆಯ ನಿವಾಸಿ ಹೋಟೆಲ್ ಉದ್ಯಮಿ ಕೆ. ಸುರೇಶ ರಾವ್ ತಾ.22.6.2021ರಂದು ನಿಧನ ಹೊಂದಿದ್ದಾರೆ. ಇವರು ಪತ್ನಿ, ಪುತ್ರ, ಪುತ್ರಿ, ಇಬ್ಬರು ಸಹೋದರರು ಹಾಗೂ ಅಪಾರ ಬಂದುಬಾಂಧವರನ್ನು ಅಗಲಿದ್ದಾರೆ.

**** ****

### ಉಜ್ಜೋಡಿ ಪ್ರಭಾಕರ ರಾವ್

ಉಜ್ಜೋಡಿ ಪ್ರಭಾಕರ ರಾವ್ (86) ತಾ.28.04.2021ರಂದು ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

**** ****

### ಶ್ರೀಮತಿ ವಿಮಲಾ ರಾವ್

ಮೂಡಬಿದ್ರಿ ದಿವಂಗತ ಬಿ ನಾರಾಯಣ ರಾಯರ ಧರ್ಮಪತ್ನಿ ವಿಮಲಾ ರಾವ್ ತಾ.05.05.2021ರಂದು ದೈವಾಧೀನರಾದರು. ಅವರು ಬೆಂಗಳೂರು ತನ್ನ ಮಗ ಭೋಜರಾಜ್ ರಾವ್ ಅವರ ಮನೆಯಲ್ಲಿ ವಾಸವಾಗಿದ್ದರು.

**** ****

### ಶ್ರೀ ಗಣೇಶ ಅಧಿಕಾರಿ

ಮೈಸೂರಿನ ಜ್ಞಾನಶಕ್ತಿ ಸಭಾದ ಸಕ್ರಿಯ ಸದಸ್ಯ ಶ್ರೀ ಗಣೇಶ ಅಧಿಕಾರಿ ಇವರು ತಾ.24.04.2021ರಂದು ನಿಧನ ಹೊಂದಿದರು. ಮೈಸೂರು ಸಂಘದ ಪ್ರಾರ್ಥನಾ ಮಂದಿರದ ಸರ್ವತೋಮುಖ ಅಭಿವೃದ್ಧಿಗೆ ತನು, ಧನ, ಮನವನ್ನು ಅರ್ಪಿಸಿ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದರು. ಸದಾ ನಗುಮುಖದ ಗಣೇಶ ಅಧಿಕಾರಿಯವರ ಅಗಲಿಕೆ ನಮ್ಮ ಸಮಾಜಕ್ಕೆ ಬಹು ದೊಡ್ಡ ನಷ್ಟ.

**** ****

### ವೇದಮೂರ್ತಿ ಬಳಗೂನು ಅಚ್ಯುತ ಹೆಬ್ಬಾರ್

ಬೆಂಗಳೂರು ನಿವಾಸಿ ವೇದಮೂರ್ತಿ ಬಳಗೂನು ಅಚ್ಯುತ ಹೆಬ್ಬಾರ್ ತಾ.05.05.2021 ರಂದು ನಿಧನ ಹೊಂದಿದರು.

**** ****

### ಶ್ರೀ ಬೈಕಾಡಿ ರಾಘವೇಂದ್ರ ರಾವ್

ಬೆಂಗಳೂರು ನಿವಾಸಿ ಶ್ರೀ ಬೈಕಾಡಿ ರಾಘವೇಂದ್ರ ರಾವ್ ತಾ.04.05.2021 ರಂದು ನಿಧನ ಹೊಂದಿದರು.

**** ****

### ಶ್ರೀ ಕುಚ್ಚೂರು ಜನಕರಾಜ ಹೆಬ್ಬಾರ್

ಬೆಂಗಳೂರು ನಿವಾಸಿ ಶ್ರೀ ಕುಚ್ಚೂರು ಜನಕರಾಜ ಹೆಬ್ಬಾರ್ ತಾ.26.01.2021 ರಂದು ನಿಧನ ಹೊಂದಿದರು.

**** ****

### ದಿ| ಶ್ರೀನಿವಾಸ ರಾವ್

ಮೂವಂದೂರು ನಿವಾಸಿ ದಿ| ಶ್ರೀನಿವಾಸ ರಾವ್ ಇವರ ಪತ್ನಿ ಶ್ರೀಮತಿ ಶಾಂತಾ 01.05.2021 ರಂದು ನಿಧನ ಹೊಂದಿದರು.

**** ****

### ಶ್ರೀ ಎಲ್ಲೂರು ವಾಸುದೇವರಾವ್

ನಿವೃತ್ತ ಶಿಕ್ಷಕ ಶ್ರೀ ಎಲ್ಲೂರು ವಾಸುದೇವರಾವ್ ತಾ.01.05.2021 ರಂದು ನಿಧನ ಹೊಂದಿದರು. ಅವರು ಎಲ್ಲೂರಿನ ಹಾಲು ಮಾರಾಟಗಾರರ ಸಹಕಾರಿ ಸಂಘದ ಮಾಜಿ ಅಧ್ಯಕ್ಷರಾಗಿದ್ದರು.

**** ****

### ಶ್ರೀ ಮೋಹನ್ ರಾವ್

ಹೊಸಕೋಟೆ ನಿವಾಸಿ ಶ್ರೀ ಮೋಹನ್ ರಾವ್ ತಾ.01.05.2021 ರಂದು ನಿಧನ ಹೊಂದಿದರು.

**** ****

### ಶ್ರೀ ಕೊಕ್ರಾಡಿ ಚಂದ್ರಶೇಖರ ರಾವ್

ಕೊಳ್ಳೆಗಾಲದ ಶ್ರೀ ಕೊಕ್ರಾಡಿ ಚಂದ್ರಶೇಖರ ರಾವ್ ತಾ.28.04.2021 ರಂದು ಚಾಮರಾಜನಗರದಲ್ಲಿ ನಿಧನ ಹೊಂದಿದರು.

**** ****

### ಶ್ರೀಮತಿ ಸುಲೋಚನಾ ರಾವ್

ಪಿಲಿಂಜೆ ನಿವಾಸಿ ಶ್ರೀಮತಿ ಸುಲೋಚನಾ ರಾವ್ ತಾ.28.04.2021ರಂದು ನಿಧನ ಹೊಂದಿದರು.

**** ****

### ಶ್ರೀ ಬಾಬುರಾವ್

ಮುದರಂಗಡಿ ನಿವಾಸಿ ಶ್ರೀ ಬಾಬುರಾವ್ ತಾ.26.04.2021ರಂದು ಕಾರ್ಕಳದಲ್ಲಿ ನಿಧನ ಹೊಂದಿದರು.

**** ****

### ಶ್ರೀಮತಿ ಲಕ್ಷ್ಮೀಬಾಯಿ

ದಿ| ಮುದರಂಗಡಿ ಆನಂದ ರಾವ್ ರವರ ಪತ್ನಿ ಶ್ರೀಮತಿ ಲಕ್ಷ್ಮೀಬಾಯಿ ತಾ.24.04.2021 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

**** ****

### ಶ್ರೀ ಮೆಕ್ಕೆಬೈಲು ನಟರಾಜ ರಾವ್

ಶ್ರೀ ಮೆಕ್ಕೆಬೈಲು ನಟರಾಜ ರಾವ್ ತಾ.24.04.2021 ರಂದು ಹರಿದ್ವಾರದಲ್ಲಿ ನಿಧನ ಹೊಂದಿದರು. ಅವರು ಗುಜರಾತ್‌ನಲ್ಲಿ ಉದ್ಯಮಿಯಾಗಿದ್ದರು.

**** ****

### ಶ್ರೀ ರಕ್ಷಿತ್ ರಾವ್

ಪೆರ್ಡೂರಿನ ಶ್ರೀ ಮೋಹನ್ ರಾವ್‌ರ ಪುತ್ರ ಶ್ರೀ ರಕ್ಷಿತ್ ರಾವ್ ತಾ.19.04.2021 ರಂದು ನಿಧನ ಹೊಂದಿದರು.

**** ****

### ಶ್ರೀ ಬಿ. ಜ್ಞಾನೇಶ್ ರಾವ್

ಉಡುಪಿ ಕುಂಜಿಬೆಟ್ಟು ನಿವಾಸಿ ಶ್ರೀ ಬಿ.ಜ್ಞಾನೇಶ್ ರಾವ್ ತಾ.05.05.2021 ರಂದು ನಿಧನ ಹೊಂದಿದರು.

**** ****

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.27-07-2021 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.22-07-2021 ಮತ್ತು ತಾ.18-08-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.28-07-2021 ಮತ್ತು ತಾ.13-08-2021 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಕರ್ಕಾಟಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-07-2021 | ಕರ್ಕಾಟಕ ಸಂಕ್ರಮಣ | 08-08-2021 | ಆಟಿ ಅಮಾವಾಸ್ಯೆ-ಭೀಮನ ಅಮಾವಾಸ್ಯೆ |
| 20-07-2021 | ಸರ್ವೈಕಾದಶಿ | 09-08-2021 | ವರ್ಷಋತು ಶ್ರಾವಣ ಮಾಸದ ಶುಕ್ಲ ಪಕ್ಷಾರಂಭ |
| 24-07-2021 | ಗುರುಪೂರ್ಣಿಮಾ, ಆಟಿ ಹುಣ್ಣಿಮೆ | 10-08-2021 | ಮಂಗಳ ಗೌರಿ ವ್ರತಂ |
| 25-07-2021 | ಗ್ರೀಷ್ಮಋತು ಆಷಾಢ ಮಾಸದ ಕೃಷ್ಣಪಕ್ಷಾರಂಭ | 13-08-2021 | ನಾಗರಪಂಚಮಿ |
| 27-07-2021 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.48 | 16-08-2021 | ಸಿಂಹ ಸಂಕ್ರಮಣ |
| 04-08-2021 | ಸರ್ವೈಕಾದಶಿ | 18-08-2021 | ಸರ್ವೈಕಾದಶಿ |


Ph : 98459 92859

Ganesh Hebbar & Associates

CHARTERED ACCOUNTANT

S.M.S.P. Complex, Udupi - 576 101.







ಶುಭಾಶಯಗಳೊಂದಿಗೆ

ಹೆಬ್ಬಾರ್ ಎಂಟರ್‌ಪ್ರೈಸಸ್

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894




RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS


ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



## ಪ್ರಶಾಂತ್ ರಾವ್ ಅವರಿಗೆ ಪಿ.ಹೆಚ್.ಡಿ

ಮಂಗಳೂರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರಶಾಂತ್ ರಾವ್ ಇವರಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಪಿ.ಎಚ್.ಡಿ. ಪದವಿಯನ್ನು ನೀಡಿ ಗೌರವಿಸಿದೆ. ಇವರು ಗಣಿತಶಾಸ್ತ್ರ ವಿಭಾಗದಲ್ಲಿ ಮಂಡಿಸಿದ 'A Study on Generalized Lattioes' ಎಂಬ ಮಹಾಪ್ರಬಂಧಕ್ಕೆ ಈ ಪದವಿ ಲಭಿಸಿದೆ. ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ। ಶಶಿರೇಖಾ ರೈ ಅವರು ಮಾರ್ಗದರ್ಶನ ನೀಡಿರುತ್ತಾರೆ. ಪ್ರಶಾಂತ್ ರಾವ್ ಉಡುಪಿಯ ಕುಕ್ಕೆಹಳ್ಳಿ ದಿ। ಕೃಷ್ಣಮೂರ್ತಿ ರಾವ್ ಹಾಗೂ ಕಲ್ಯಾಣಿ ರಾವ್ ಅವರ ಪುತ್ರ.



## ಶ್ರೀ ಜನಾರ್ಧನ ರಾವ್ ಹಾವಂಜೆ ಇವರಿಗೆ ಪಿ.ಹೆಚ್.ಡಿ.

ಶ್ರೀ ಜನಾರ್ಧನ ರಾವ್ ಹಾವಂಜೆ ಇವರಿಗೆ ಮಣಿಪಾಲ ಮಾಹೆ ಯೂನಿವರ್ಸಿಟಿಯಿಂದ ಕಾವಿ ಭಿತ್ತ ಚಿತ್ರಕಲೆ ಒಂದು ಅಧ್ಯಯನ ಎಂಬ ಪ್ರಬಂಧಕ್ಕೆ ಪಿ.ಹೆಚ್.ಡಿ. ಪದವಿ ಪ್ರಧಾನಿಸಿ ಗೌರವಿಸಿದೆ.

## ಭಜನಾ ಕಮ್ಮಟೋತ್ಸವ



ಮೂಡಬಿದ್ರಿಯ ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ) ಆಯೋಜನೆಯ ಒಂದು ದಿನದ ಭಜನಾ ಕಮ್ಮಟೋತ್ಸವ ಮೂಡಬಿದ್ರಿ ಗೌರಿ ದೇವಸ್ಥಾನದಲ್ಲಿ ಏಪ್ರಿಲ್ ತಿಂಗಳ ದಿನಾಂಕ 18 ರ ಆದಿತ್ಯವಾರ ಬೆಳಿಗ್ಗೆ 8 ರಿಂದ ಸಂಜೆ 6ರವರೆಗೆ ಜರಗಿತು. ಇಲ್ಲಿ ಬೇರೆ ಬೇರೆ ಕಡೆಗಳಿಂದ ನಮ್ಮವರ ಭಜನಾ ತಂಡಗಳು ಉತ್ಸಾಹದಿಂದ ಭಾಗವಹಿಸಿದ್ದವು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುಬ್ಬರಾವ್ ಪೊಳಲಿ, ಶ್ರೀ ರಾಮಕೃಷ್ಣ ಕಾಟುಕುಕ್ಕೆ, ಶ್ರೀ ಪ್ರೀತು ಪೊಳಲಿ ಆಗಮಿಸಿದ್ದರು. ಈ ಕಮ್ಮಟ ದಿನಪೂರ್ತಿ ನಡೆಯಿತು. ಬೆಳಿಗ್ಗೆ ಉದ್ಘಾಟನೆ ಹಾಗೂ ಸಂಜೆ ಸಮಾರೋಪ ಸಮಾರಂಭ ನೆರವೇರಿತು.

## ವೈವಾಹಿಕ ಬೆಳ್ಳಿ ಹಬ್ಬ ಆಚರಣೆ



ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರೂ, ಅತ್ಯುತ್ತಮ ಛಾಯಚಿತ್ರಕಾರರೂ ಆಗಿರುವ ಶ್ರೀ ರಘುವೀರ್ ಪೆರ್ಡೂರು ಮತ್ತು ಶ್ರೀಮತಿ ಲತಾರವರ ವೈವಾಹಿಕ ಬೆಳ್ಳಿ ಹಬ್ಬದ (3.5.2021) ಪ್ರಯುಕ್ತ ಶ್ರೀ ಸಭಾದ ಪುತ್ತೂರಿನ "ಶಿವಸದನ"ದ ವೃದ್ಧಾಶ್ರಮಕ್ಕೆ ರೂ.1,00,000 (ಒಂದು ಲಕ್ಷ) ದೇಣಿಗೆಯನ್ನು ನೀಡಿ ಆಚರಿಸಿದರು. ಇವರ ಆದರ್ಶ ಎಲ್ಲರಿಗೂ ಮಾದರಿಯಾಗಲಿ ಮತ್ತು ಇವರ ದಾಂಪತ್ಯ ಜೀವನ ಯಶಸ್ವಿಯಾಗಿ ಸುವರ್ಣ ವರ್ಷದತ್ತ ಸಾಗಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಹಾರ್ದಿಕ ವಂದನೆಗಳು.

## ದೇಣಿಗೆ ನೀಡಿದವರಿಗೆ ಪ್ರಮಾಣ ಪತ್ರ ವಿತರಣೆ







ಶ್ರೀ ಶಾರದಾ ಮಂಟಪದ ಭೋಜನ ಶಾಲೆಯ ನವೀಕರಣಕ್ಕೆ ರೂ.30000/–ಕ್ಕಿಂತಲೂ ಹೆಚ್ಚು ಧನಸಹಾಯ ನೀಡಿದ ದಾನಿಗಳಿಗೆ ಮುಂದಿನ ಹತ್ತು ವರ್ಷಗಳಲ್ಲಿ ಶ್ರೀ ಶಾರದಾ ಮಂಟಪವನ್ನು ಅವರು ಕಾದಿರಿಸುವ ಒಂದು ದಿನವನ್ನು ಉಚಿತವಾಗಿ ನೀಡುವ ಬಗ್ಗೆ ಪ್ರಮಾಣ ಪತ್ರವನ್ನು ತಾ.14.3.2021ರಂದು ವಿತರಿಸಲಾಯಿತು.

## ಶ್ರೀ ಶಾರದಾ ಮಂಟಪಕ್ಕೆ ಕೊಡುಗೆ


ದಿ। ಕೃಷ್ಣಯ್ಯ ಹೆಬ್ಬಾರ್ ಕಬ್ಬಿನಾಲೆ ಹಾಗೂ ದಿ।ರಂಗಯ್ಯ ಹೆಬ್ಬಾರ್ ಕಬ್ಬಿನಾಲೆ ಇವರ ಸವಿನೆನಪಿನಲ್ಲಿ ಅವರ ಪುತ್ರರು ಒಟ್ಟು ರೂ. 2ಲಕ್ಷ 50 ಸಾವಿರವನ್ನು ದೇಣಿಗೆಯಾಗಿ ಭೋಜನಶಾಲೆಯ ನವೀಕರಣಕ್ಕೆ ಕೊಟ್ಟದ್ದನ್ನು ಸ್ಮರಿಸಿಕೊಂಡು ದಿ। ಕೃಷ್ಣಯ್ಯ ಹೆಬ್ಬಾರ್‌ರ ಮಕ್ಕಳಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಶ್ರೀ ಸತೀಶ್ ಹೆಬ್ಬಾರ್ ಮತ್ತು ದಿ। ರಂಗೆಯ್ಯ ಹೆಬ್ಬಾರ್‌ರ ಮಕ್ಕಳಾದ ಶ್ರೀ ಗಣೇಶ್ ಹೆಬ್ಬಾರ್ ಹಾಗೂ ಶ್ರೀ ಪ್ರಕಾಶ್ ಹೆಬ್ಬಾರ್ ಇವರೆಲ್ಲರನ್ನು ಸಂಘದ ವತಿಯಿಂದ ಗೌರವಿಸಲಾಯಿತು.

## ದೇವಸ್ಥಾನದ ದ್ವಾರದ ಕಾಮಗಾರಿಯ ಭೂಮಿ ಪೂಜೆಯ ಕಾರ್ಯಕ್ರಮ



ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದ ಉತ್ತರ ದಿಕ್ಕಿನ ಕಾರ್ಕಳ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ದ್ವಾರದ ಕಾಮಗಾರಿಯ ಭೂಮಿ ಪೂಜೆಯ ಕಾರ್ಯಕ್ರಮ ತಾ.30.04.2021ರ ಶುಕ್ರವಾರ ಬೆಳಿಗ್ಗೆ ಶುಭಮೂಹುರ್ತದಲ್ಲಿ ಶ್ರೀ ಕ್ಷೇತ್ರದ ಪ್ರದಾನ ಅರ್ಚಕರಾದ ಶ್ರೀ ಜಗದಾಬಿರಾಮ ಸ್ವಾಮಿಯವರು ನೆರವೇರಿಸಿದರು. ದ್ವಾರದ ನಿರ್ಮಾಣ ಮಾಡುವವರು ಹಾಗೂ ದಾನಿಗಳಾದ ಶ್ರೀ ಶೇಖರ ಶೆಟ್ಟಿಯವರು ಉಪಸ್ಥಿತರಿದ್ದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ



ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿಯನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು. ಪುರೋಹಿತರಾದ ಶ್ರೀ ಜಗದೀಶ್ ಉಪಾಧ್ಯರವರು ಹಾಗೂ ಲಕ್ಷ್ಮೀನಾರಾಯಣ ಭಟ್ ಮತ್ತು ಧರಣೀಶ್ ಭಟ್‌ರ ನೇತೃತ್ವದಲ್ಲಿ ಪೂಜೆ ಪುನಸ್ಕಾರಗಳು ನಡೆಯಿತು. ನಂತರ ಶ್ರೀ ಜಗದೀಶ್ ಉಪಾಧ್ಯರಿಂದ ಸಂಕ್ಷಿಪ್ತ ಮಾಧವೀಯ ಶ್ರೀ ಶಂಕರ ವಿಜಯದ ಪಾರಾಯಣ ನಡೆಯಿತು. ಅಧ್ಯಕ್ಷರಾದ ಕೆ.ಮಂಜುನಾಥ್ ಹೆಬ್ಬಾರ್, ಪ್ರಭಾರ ಕಾರ್ಯದರ್ಶಿ ಪ್ರಭಾಕರ ಭಂಡಿ, ಸಹ ವ್ಯವಸ್ಥಾಪಕರಾದ ನಾಗಭೂಷಣ ರಾವ್ ಉಪಸ್ಥಿತ ರಿದ್ದರು. ಮೇನೆಜರ್ ಅಜಿತ್ ರಾವ್ ಪೂಜೆಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಸಿದ್ಧಪಡಿಸಿದ್ದರು.

*With Best Compliments from :*




**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

PRODUCTS ARE AVAILABLE AT ATTRACTIVE DISCOUNT PRICES




**BATTERY PLANET**
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಸುರತ್ಕಲ್ : ಶ್ರೀ ಸುಬ್ರಹ್ಮಣ್ಯ ಟ್ರೋಫಿ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಸುರತ್ಕಲ್-ಇದರ ಅಂಗಸಂಸ್ಥೆ ಯುವ ವೇದಿಕೆಯ ವತಿಯಿಂದ 6ನೇ ವರ್ಷದ ಶ್ರೀ ಸುಬ್ರಹ್ಮಣ್ಯ ಟ್ರೋಫಿಯು ತಾ.04.04.2021ನೇ ರವಿವಾರದಂದು ಪಣಂಬೂರಿನ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜರಗಿತು. ಬೆಳಿಗ್ಗೆ 9.00 ಘಂಟೆಗೆ ಸರಿಯಾಗಿ ರಾಜ್ಯಾಂದ್ಯಂತದ ಸುಮಾರು 13 ತಂಡಗಳು ಭಾಗವಹಿಸಿದ್ದವು. ವೇದಿಕೆಯಲ್ಲಿ ಮ.ನ.ಪಾ ಉಪಮೇಯರ್‌ರವರಾದ ಶ್ರೀಮತಿ ಸುಮಂಗಲ ರಾವ್, ಸಂಘದ ಅಧ್ಯಕ್ಷರಾದ ಶ್ರೀ.ಕೆ. ಮಾಧವ ರಾವ್, ಗೌರವಾಧ್ಯಕ್ಷರಾದ ಮಲ್ಲಮಾರು ಭವಾನಿಶಂಕರ ರಾವ್, ಸಂಘದ ಉಪಾಧ್ಯಕ್ಷರುಗಳಾದ ಶ್ರೀ ವಾಸು ದೇವ ಶಾನುಭಾಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ.ಯು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಉಪಮೇಯರ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು ಹಾಗೂ ತಮ್ಮ ಅನುಭವವನ್ನು ಹಂಚಿಕೊಂಡರು. ನಂತರ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಪರಿಮಳ ಪ್ರಶಾಂತ್‌ರವರು ಚೆಂಡನ್ನು ಎಸೆಯುದರೊಂದಿಗೆ ಹಾಗೂ ಶ್ರೀಮತಿ ಸುಮಂಗಲಾ ರಾವ್‌ರವರು ಬ್ಯಾಟಿಂಗ್ ಮಾಡುವುದರೊಂದಿಗೆ ಆಟವನ್ನು ಉದ್ಘಾಟಿಸಿದರು. 13 ತಂಡಗಳ ನಡುವೆ ನಡೆದ ಪಂದ್ಯಾಟದಲ್ಲಿ ಕೊನೆಗೆ ಫೈನಲ್ ಆಟಕ್ಕೆ ಪ್ರವೇಶವನ್ನು ಪಡೆದ ನಂದಳಿಕೆ 'ಎ ತಂಡ ಹಾಗೂ ಮಂಗಳೂರು ತಂಡಗಳ ಮಧ್ಯೆ ರೋಚಕವಾದ ಆಟ ನಡೆದು ನಂದಳಿಕೆ 'ಎ ತಂಡವು ಪ್ರಥಮ ಸ್ಥಾನವನ್ನೂ, ಮಂಗಳೂರು ತಂಡವು ದ್ವಿತೀಯ ಸ್ಥಾನವನ್ನೂ ಪಡೆದು ಟ್ರೋಫಿಗಳನ್ನು ತನ್ನದಾಗಿಸಿಕೊಂಡವು. ಸಮಾರೋಪ ಸಮಾರಂಭ'ದಲ್ಲಿ ಮಂಗಳೂರಿನ ನ್ಯಾಯವಾದಿ ಅದ್ಯಪಾಡಿ ಶ್ರೀ ಪ್ರವೀಣ್ ಕುಮಾರ್ ಮುಖ್ಯ ಅತಿಥಿಯಾಗಿಯೂ, ಪ್ರಥಮ ಸ್ಥಾನದ ಬಹುಮಾನದ ಪ್ರಾಯೋಜಕರಾದ ಶ್ರೀ ಜನಕರಾಜ್, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದು, ಮುಖ್ಯ ಅತಿಥಿಗಳು ಶ್ರೀ ಸುಬ್ರಹ್ಮಣ್ಯ ಟ್ರೋಫಿಗಳನ್ನು, ಉತ್ತಮ ಎಸೆತಗಾರ, ಉತ್ತಮ ದಾಂಡಿಗ, ಸರ್ವಾಂಗೀಣ ಆಟಗಾರ ಮೊದಲಾದ ಬಹುಮಾನಗಳನ್ನೂ ವಿತರಿಸಿದರು. ಕಾರ್ಯಕ್ರಮದ ನಿರೂಪಣೆಯುನ್ನು ಶ್ರೀ ಸುಕುಮಾರ್ ಎಂ.ಯು ರವರು ನೆರವೇರಿಸಿ ಧನ್ಯವಾದಗಳನ್ನು ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಶ್ರೀ ಕೆ.ದಿನಮಣಿ ಶಾಸ್ತ್ರಿಯವರಿಗೆ ಬೀಳ್ಕೊಡುಗೆ



ಕಳೆದ ಇಪ್ಪತ್ತೇಳು ವರುಷಗಳಿಂದ ಬ್ರಹ್ಮಾವರದ ಸರಕಾರಿ ಪ.ಪೂ. ಕಾಲೇಜಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ, ಹವ್ಯಾಸಿ ಬರಹ ಮತ್ತು ಛಾಯಾಚಿತ್ರಗಾರರಾಗಿ ಸೇವಾ ನಿವೃತ್ತಿ ಹೊಂದಿದ ಶ್ರೀ ಕೆ.ದಿನಮಣಿ ಶಾಸ್ರೀ ಅವರನ್ನು ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಶ್ರೀಯುತರ ಪತ್ನಿ ಗಾಯತ್ರಿ ಶಾಸ್ರಿ, ಶ್ರೀ ಕೆ.ಅಶೋಕ ಕಾಮತ್, ಡಯಟ್ ಉಪ ಪ್ರಾಂಶುಪಾಲರು, ಶ್ರೀ ಕೆ.ಶೇಖರ ಹೆಗ್ಡೆ, ನಿವೃತ್ತ ಶಿಕ್ಷಕರು, ಶ್ರೀ ಬಿ.ಟಿ.ನಾಯಕ್, ಉಪ ಪ್ರಾಂಶುಪಾಲರು, ಶ್ರೀಮತೀ ಉಷಾಬಾಯಿ, ನಿವೃತ್ತ ಶಿಕ್ಷಕಿ, ರೊಟೇರಿಯನ್ ಶ್ರೀ ಭಾಸ್ಕರ ರೈ, ಪಿ.ಟಿ.ಎ. ಅಧ್ಯಕ್ಷ ಶ್ರೀ ಸದಾನಂದ ವಾರಂಬಳ್ಳಿ ಮತ್ತು ಉಪಾಧ್ಯಕ್ಷ ಶ್ರೀ ಸತೀಶ್ ಕೋಟ್ಯಾನ್, ಶಿಕ್ಷಕ ವೃಂದ ಹಾಗೂ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು. ಶ್ರೀಮತಿ ಸುಶೀಲಾ ಕೆ. ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಸುಶೀಲಾ ಎಂ. ವಂದನಾರ್ಪಣೆಗೈದರು.

## ಶಂಕರ ಪ್ರತಿಷ್ಠಾನ ಕಾರ್ಕಳದಲ್ಲಿ ಶಿವರಾತ್ರಿ ಮಹೋತ್ಸವ



ಶಂಕರ ಪ್ರತಿಷ್ಠಾನ ಕಾರ್ಕಳದಲ್ಲಿ ಶಿವರಾತ್ರಿ ಮಹೋತ್ಸವವು ಶ್ರೀ ಸತೀಶ ಭಟ್ ಇವರ ಪೌರೋಹಿತ್ಯದಲ್ಲೀ, ನಮ್ಮ ಸಮಾಜ ಬಾಂಧವರ ಸಹಯೋಗದೊಂದಿಗೆ ಶ್ರದ್ಧಾ ಭಕ್ತಿಯಿಂದ, ಪ್ರಸಾದ ಭವನ ತೆಳ್ಳಾರೂ ರಸ್ತೆ ಇಲ್ಲಿ ತಾ.11.3.2021ರ ಗುರುವಾರ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ಕೇಶವ ರಾವ್ ದಂಪತಿಗಳು ಕುಕ್ಕುಂದೂರು, ಕಾರ್ಯದರ್ಶಿ ಶ್ರೀ ಹರಿಶ್ಚಂದ್ರ ರಾವ್ ಕರ್ವಾಲ, ಶ್ರೀ ಕೋದಂಡರಾಮ, ಶ್ರೀ ಕೃತಿವಾಸ ಶರ್ಮಾ, ಶ್ರೀ ರಾಜಶೇಖರ ಕುಕ್ಕುಂದೂರು ಹಾಗೂ ಶ್ರೀ ಭವಾನಿ ಶಂಕರ ದಂಪತಿಗಳು ಇವರು ಪೂಜಾ ಕಾರ್ಯದಲ್ಲಿ ಸಹಕರಿಸಿದರು. ಶ್ರೀ ರತ್ನಾಕರ್ ರಾವ್ ದಂಪತಿಗಳು ಗುಡ್ಡೆ ಅಂಗಡಿ, ಕಾರ್ಕಳ ಇವರು ಉಪಾಹಾರದ ಪ್ರಾಯೋಜಕತ್ವ ವಹಿಸಿದ್ದರು. ಮಹಿಳಾ ತಂಡದ ಸದಸ್ಯರು ಭಜನಾ ಕಾರ್ಯಕ್ರಮ ನೆರವೇರಿಸಿದರು. ಸುಮಾರು 60 ಜನ ಸಮಾಜ ಭಾಂದವರು ಭಾಗವಹಿಸಿದ್ದರು. ಶ್ರೀಮತಿ ಸಾವಿತ್ರಿ ಮನೋಹರ್, ಶ್ರೀ ಮುರಳೀಧರ ಶರ್ಮಾ, ಶ್ರೀ ರಾಜಶೇಖರ ಕುಕ್ಕುಂದೂರು, ಶ್ರೀ ಅರವಿಂದ ರಾವ್ ಕಲ್ಯ, ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು, ಶ್ರೀ ವಿಜಯ ಕುಮಾರ್ ಪರಪ್ಪು ಉಪಸ್ಥಿತರಿದ್ದರು. ಶ್ರೀ ರವಿ ಪ್ರಕಾಶ್, ಕಾರ್ಕಳ ಇವರು ಸಹಕಾರವಿತ್ತರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದ ವಿತರಣೆಯೊಂದಿಗೆ ವಂದನಾರ್ಪಣೆ ಸಲ್ಲಿಸಲಾಯಿತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು, ಉಡುಪಿ.

ಆತ್ಮೀಯರೇ,


**ಆಡಳಿತ ಮಂಡಳಿ ನಿರ್ಣಯದಂತೆ ಕರೋನ ಅನ್ಲಾಕ್ ಪೂರ್ಣ ಮುಗಿಯುವವರೆಗೆ ನಮ್ಮ ಸಭಾಂಗಣದ ಬಾಡಿಗೆಯ ದರವನ್ನು ಈಗಿರುವ ದರದ ಅರ್ಧಕ್ಕೆ ಇಳಿಸಲಾಗಿದೆ.**

**ತಾವುಗಳು ಬಯಸಿದಲ್ಲಿ ಈಗಿರುವ ಸರ್ಕಾರದ ನಿಯಮದಂತೆ (100 ಜನ) ಮದುವೆ ಇನ್ನಿತರ ಸಮಾರಂಭವನ್ನು ರಿಯಾಯಿತಿ ಪ್ಯಾಕೇಜ್‌ನಲ್ಲಿ ನಡೆಸಲಾಗುವುದು. (ಹಾಲ್ ಬಾಡಿಗೆ, ಊಟ-ಉಪಹಾರ, ಸಿಂಪಲ್ ಡೆಕೋರೇಷನ್, ವಾದ್ಯ, ಕ್ಲೀನ್ ಎಲ್ಲವೂ ಸೇರಿ)**

ಹೆಚ್ಚಿನ ಮಾಹಿತಿಗಾಗಿ :
ಅಜಿತ್ ರಾವ್(ಮೆನೇಜರ್)-919448108920
ನಾಗಭೂಷಣ್ ರಾವ್ (ಸಹಾಯಕ ಮೆನೇಜರ್)-919964069306
ಇವರನ್ನು ಸಂಪರ್ಕಿಸಬಹುದು.

ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಸದಸ್ಯರು
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ.
ಫೋನ್. ನಂ. 08202958444.



ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ



Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org